ಇದೇ ರಸ್ತೆಯಲ್ಲಿ ಬರಬೇಕಾಗಿರುವುದರಿಂದ ಇದನ್ನು ಶೀಘ್ರಗತಿಯಲ್ಲಿ ಮಾಡಿಸಿಕೊಡಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ. ಜೊತೆಗೆ ಇಲ್ಲಿ ಹತ್ತು ಚಕ್ರವಾಹನಗಳು ತುಂಬಾ ಬರುತ್ತಿವೆ. ಗಣಿಯ ವಾಹನಗಳು ಬರುತ್ತವೆ ಮತ್ತು ಬಿದಿರನ್ನು ತೆಗೆದುಕೊಂಡು ಹೋಗುವಂತಹ, ಟಿಂಬರ್ ವಾಹನಗಳು ಈ ರಸ್ತೆಯಲ್ಲಿ ಮಳೆಗಾಲದಲ್ಲಿ ಓಡಾಡುತ್ತಿರುವುದರಿಂದ ತೊಂದರೆಯಾಗಿದೆ. ಅವುಗಳನ್ನು ಮಳೆಗಾಲ ಕಳೆಯುವವರೆಗಾದರೂ ತಾತ್ಕಾಲಿಕವಾಗಿ ತಡೆಯಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೇ, ಈಗಾಗಲೇ ಗುಂಡಿಗಳನ್ನು ಮುಚ್ಚುವ ಬಗ್ಗೆ ಕ್ರಮವನ್ನು ತೆಗೆದುಕೊಂಡಿದ್ದೇವೆ. ಮತ್ತು ಶೃಂಗೇರಿ ಭಾಗದಲ್ಲಿ ಈಗಾಗಲೇ ಕೆಲವು ಧಸ್ತೆಗಳನ್ನು ತೆಗೆದುಕೊಳ್ಳುವುದಕ್ಕೆ ಅಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟಿದ್ದೇನೆ. ಈ ಕೆಲಸವನ್ನು ನಾನು ಮಾಡಿಸುತ್ತೇನೆ.

ಆ) ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು (ಅನುಬಂಧ I)

1. ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿ) : ಮಾನ್ಯ ಅಧ್ಯಕ್ಷರೇ, ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳ 3ನೇ ಪಟ್ಟಿಯಲ್ಲಿರುವ 42 ಪ್ರಶ್ನೆಗಳ ಪೈಕಿ 36 ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡುವ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ. (ಅನುಬಂಧ II)

ಅಧ್ಯಕ್ಷರು : ಮಂಡಿಸಲಾಯಿತು.

ಅ) ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ : ಬೆಂಗಳೂರಿನ ನಾಗರಭಾವಿ ಪೋಲೀಸ್ ಸ್ಟೇಷನಲ್ಲಿ ಧನಂಜಯ ಎನ್ನುವ ವ್ಯಕ್ತಿ ಅಮಾನುಷವಾಗಿ ಸತ್ತಿರುವುದರ ಬಗ್ಗೆ

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೇ, ಇವತ್ತು ಬೆಂಗಳೂರಿನ ನಾಗರಭಾವಿ ಪೊಲೀಸ್ ಸ್ಟೇಷನ್‌ನಲ್ಲಿ ಧನಂಜಯ ಎನ್ನುವ ವ್ಯಕ್ತಿ ಅಮಾನುಷವಾಗಿ ಸತ್ತಿದ್ದಾನೆ. ಇದು ಒಂದು ಲಾಕಪ್ ಸಾವು. ಇವತ್ತಿನ ದಿವಸಗಳಲ್ಲಿ ರಾಜ್ಯದಾದ್ಯಂತ ಈ ರೀತಿಯ ಲಾಕಪ್ ಸಾವುಗಳು ನಿರಂತವಾಗಿ ನಡೆಯುತ್ತಿವೆ. ಹಿಂದೆ ಇಂತಹ ಒಂದು ಸಣ್ಣ ವಿಚಾರ ಬಂದಾಗಲೂ ಸದನದಲ್ಲಿ ಕೋಲಾಹಲ ನಡೆದ ನಿದರ್ಶನಗಳು ಉಂಟು. ಬಹುಶಃ ಲಾಕಪ್ ಸಾವಿನ ಬಗ್ಗೆ ಪರಿಣಾಮಕಾರಿಯಾದಂಥ, ಸಮಗ್ರವಾದಂಥ ತನಿಖೆ ಆಗಬೇಕಾಗುತ್ತದೆ. ರಾತ್ರಿ ಹತ್ತೂವರೆ ಗಂಟೆಗೆ ಓಡಾಡುತ್ತಿದ್ದರು ಎಂದು ಹೇಳುತ್ತಾರೆ, ಅವರು ಕುಡಿದಿದ್ದರು ಎಂದು ಹೇಳುತ್ತಾರೆ. ಅವರನ್ನು ಸ್ಟೇಷನ್‌ಗೆ ಕರೆದುಕೊಂಡು ಹೋದರು ಎಂದು ಹೇಳುತ್ತಾರೆ.

ಲಾಕಪ್‌ನಲ್ಲಿ ಗಾಜನ್ನು ಒಡೆದು ಆ ಗಾಜಿನಲ್ಲಿ ತನ್ನ ಹೊಟ್ಟೆಯನ್ನು ತಿವಿದುಕೊಂಡು ಸತ್ತ ಎನ್ನತಕ್ಕಂಥಾದ್ದು ಇದು. ಅವರು ಹೇಳತಕ್ಕಂಥಾದ್ದು, ಇದು ಸತ್ಯ ಅಲ್ಲ. ಅಪ್ರಾಮಾಣಿಕವಾದ ಹೇಳಿಕೆಯನ್ನು ಪೊಲೀಸರು ನೀಡಿದ್ದಾರೆ. ಇದು ನಿಜಕ್ಕೂ ಪೊಲೀಸ್ ರಾಜ್ಯವನ್ನು ನಾಚಿಸುವಂತಹ ಪೋಲೀಸ್ ರಾಜ್ಯವೇ ಎನ್ನತಕ್ಕಂಥ ಪ್ರಶ್ನೆ ಉದ್ಭವವಾಗುತ್ತದೆ. ತಮಗೆ ನಾನು ಹೇಳುತ್ತಿದ್ದೇನೆ, ಬಹಳ